## ನಿಮ್ಮೊಡನೆ

# ಆದ್ಯತೆಯ ವಿಷಯಗಳು ಹಿನ್ನೆಲೆಗೆ ಚುನಾವಣಾ ರಾಜಕಾರಣ ಮುನ್ನೆಲೆಗೆ

ಕರ್ನಾಟಕಕ್ಕೆ ಕೊರೊನಾ ಕಾಲಿಟ್ಟು ಏಳು ತಿಂಗಳು ಉರುಳಿವೆ. ಸೋಂಕು ಪ್ರಕರಣಗಳು ಹೆಚ್ಚುತ್ತಲೇ ಇವೆ. ಕೋಟೆ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತೆ ಆರೋಗ್ಯ ಖಾತೆಯ ಹೊಣೆಯನ್ನು ಈಗ ಬೇರೊಬ್ಬರಿಗೆ ವಹಿಸಲಾಗಿದೆ. ಎಂತಹ ತ್ವರಿತ ಸ್ಪಂದನ!

ನಮ್ಮ ದೇಶದಲ್ಲಿ ಋತುಗಳಿಗೆ ಅತೀತವಾದ ವಿದ್ಯಮಾನ ಯಾವುದಾದರೂ ಇದ್ದರೆ ಅದು ಚುನಾವಣೆ. ವರ್ಷಪೂರ್ತಿ ಅದೇ ಗುಂಗು. ಲೋಕಸಭಾ ಚುನಾವಣೆ, ವಿಧಾನಸಭೆಗಳಿಗೆ ಚುನಾವಣೆ, ಉಪಚುನಾವಣೆ, ಸ್ಥಳೀಯ ಸಂಸ್ಥೆಗಳ ಚುನಾವಣೆ, ಮೇಲ್ಮನೆ ಚುನಾವಣೆ... ಹೀಗೆ ಸದಾ ಒಂದಲ್ಲ ಒಂದು ಚುನಾವಣೆ ಇದ್ದೇ ಇರುತ್ತದೆ. ಇತ್ತೀಚಿನ ವರ್ಷಗಳಲ್ಲಿ ನೀತಿ–ನಿಲುವುಗಳನ್ನೂ ಅದೇ ನಿರ್ದೇಶಿಸತೊಡಗಿದೆ. ಹೀಗಾಗಿ ರಾಜಕಾರಣದ್ದೇ ಸದಾ ಜಪ. ನಿಮಗೆ ಇಷ್ಟವೋ ಕಷ್ಟವೋ ಅದನ್ನೇ ಹಾಸಿ–ಹೊದೆಯಬೇಕಾದ ಸ್ಥಿತಿ!

ರಾಜಕಾರಣವು ದಿನೇ ದಿನೇ ಅಪರಿಮಿತ ಶಕ್ತಿಯನ್ನು ಆವಾಹಿಸಿಕೊಳ್ಳುತ್ತಿದೆ. ಅದು, ಎಂತಹ ಬಿಕ್ಕಟ್ಟನ್ನಾಗಲೀ ಗಂಭೀರ ಸಮಸ್ಯೆಯನ್ನಾಗಲೀ ಅಪ್ರಸ್ತುತಗೊಳಿಸುವ ತಾಕತ್ತನ್ನು ಪಡೆಯತೊಡಗಿದೆ. ಆ ದೈತ್ಯಶಕ್ತಿ ಎದುರು ಜನ ಅಸಹಾಯಕರಾಗತೊಡಗಿದ್ದಾರೆ. ಜನಜೀವನದ ದೈನಂದಿನ ಕನಿಷ್ಠ ಅಗತ್ಯಗಳಿಗೆ ಭಂಗ ಉಂಟಾಗದಂತೆ ಸರ್ಕಾರ ನೋಡಿಕೊಳ್ಳುತ್ತದೆ ಎಂಬ ನಂಬಿಕೆ ಇತ್ತು. ಈಗ ಅದು ಕೂಡ ಹುಸಿಯಾಗತೊಡಗಿದೆ. ಆದಾಯ ನಷ್ಟದ ಕಾಲದಲ್ಲಿ ಬೆಲೆ ಏರಿಕೆಯ ಬರೆ.

ಈಗಿನ ಸಂದರ್ಭವನ್ನೇ ನಿದರ್ಶನವನ್ನಾಗಿ ತೆಗೆದುಕೊಳ್ಳೋಣ. ಕೊರೊನಾದಿಂದ ಜನರ ಬದುಕು ದಿಕ್ಕೆಟ್ಟಿದೆ. ಯಾರನ್ನೇ ಮಾತನಾಡಿಸಿ, ಅವರ ಮಾತಿನಲ್ಲಿ ಅಳುಕು, ಅಭದ್ರ ಭಾವ ಇಣುಕುತ್ತದೆ. ಅಳುಕು, ಅಭದ್ರತೆಗೆ ನಿರ್ದಿಷ್ಟ ರೂಪ, ಕಾರಣಗಳು ಸ್ಪಷ್ಟವಾಗಿ ಗೊತ್ತಿಲ್ಲದಿದ್ದರೂ ಅಂತರಂಗದಲ್ಲಿ ಅಂತಹದೊಂದು ಭಾವ ಮಡುಗಟ್ಟಿರುವುದು ದಿಟ. ನೌಕರಿ, ಸಂಬಳ, ಮಕ್ಕಳ ವಿದ್ಯಾಭ್ಯಾಸ, ಭವಿಷ್ಯದ ಯೋಜನೆ... ಈ ಯಾವುದರ ಬಗೆಗೂ ಖಚಿತವಾಗಿ ಏನೂ ಹೇಳಲಾಗದ ಅತಂತ್ರ ಸ್ಥಿತಿಗೆ ಈ ಸಾಂಕ್ರಾಮಿಕ ದೂಡಿದೆ.

ಸರ್ಕಾರಿ ನೌಕರರು, ಧನಿಕರು, ಅಧಿಕಾರಸ್ಥ ರಾಜಕಾರಣಿಗಳಂತಹ ಕೆಲವೇ ವರ್ಗಗಳನ್ನು ಹೊರತುಪಡಿಸಿ ಉಳಿದ ಜನಸಮೂಹ ಇಂತಹ ಹೊಯ್ದಾಟಕ್ಕೆ ಸಿಲುಕಿರುವ ಸಂದರ್ಭದಲ್ಲಿ ನಮ್ಮನ್ನು ಆಳುವವರ ಜವಾಬ್ದಾರಿಗಳು ಏನಾಗಿರಬೇಕು? ಅವರು ಹೇಗೆ ನಡೆದುಕೊಳ್ಳಬೇಕು? ಅವರ ಆದ್ಯತೆಗಳು ಹೇಗಿರಬೇಕು? ರಾಜಕೀಯ ಬಡಿದಾಟ ಪಕ್ಕಕ್ಕೆ ಸರಿಸಿ, ಜನರ ನೋವಿಗೆ ಮಿಡಿಯುವ ಕೆಲಸದಲ್ಲಿ ಜನಪ್ರತಿನಿಧಿಗಳೆಲ್ಲರೂ ಪಕ್ಷಭೇದ ಮರೆತು ಬದ್ಧತೆಯಿಂದ ತೊಡಗಿಸಿಕೊಳ್ಳಬೇಕಿತ್ತು. ಅಂತಹ ಬದ್ಧತೆ ಎಲ್ಲಾದರೂ ಕಾಣಸಿಗುವುದೇ?

ನಮ್ಮ ಯಾವುದೇ ರಾಜ್ಯದ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ಬದ್ಧತೆಗೆ ಸಂಬಂಧಿಸಿದ ಯಾವ ಪ್ರಶ್ನೆಯೂ ಆಳುವವರನ್ನು ಕಾಡುತ್ತಿರುವಂತೆ ಕಾಣಿಸುವುದಿಲ್ಲ. ಮನುಕುಲ ಕಂಡ ಅತ್ಯಂತ ಭೀಕರ ಬಿಕ್ಕಟ್ಟಿನ ಈ ಸನ್ನಿವೇಶದಲ್ಲೂ ರಾಜಕಾರಣದ ಯುಕ್ತಿ–ಕುಯುಕ್ತಿಗಳೇ ಮುಖ್ಯವಾಗಿವೆ ಎಂಬುದು ಅಧಿಕಾರಸ್ಥರ ನೀತಿ–ನಿಲುವುಗಳಿಂದಲೇ ವ್ಯಕ್ತವಾಗುತ್ತದೆ. ಇದರಲ್ಲಿ ಪ್ರಾದೇಶಿಕ ಪಕ್ಷ, ರಾಷ್ಟ್ರೀಯ ಪಕ್ಷ ಎಂಬ ಭೇದವೂ ಇಲ್ಲ. ಸಮ್ಮಿಶ್ರ ಸರ್ಕಾರ, ಏಕಪಕ್ಷ ಸರ್ಕಾರ ಎಂಬ ಭಿನ್ನತೆಯೂ ಇಲ್ಲ. ಇನ್ನು, ತತ್ವ– ಸಿದ್ಧಾಂತದ ಬಗ್ಗೆ ಹೇಳದಿರುವುದೇ ಲೇಸು. ಅವು ಎಂದೋ ಗಾಳಿಗೆ ತೂರಿಹೋಗಿವೆ!

ಕರ್ನಾಟಕಕ್ಕೆ ಕೊರೊನಾ ಕಾಲಿಟ್ಟು ಏಳು ತಿಂಗಳು ಉರುಳಿವೆ. ಸೋಂಕು ಪ್ರಕರಣಗಳು ಹೆಚ್ಚುತ್ತಲೇ ಇವೆ. ಕೋಟೆ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತೆ ಆರೋಗ್ಯ ಖಾತೆಯ ಹೊಣೆಯನ್ನು ಈಗ ಬೇರೊಬ್ಬರಿಗೆ ವಹಿಸಲಾಗಿದೆ. ಎಂತಹ ತ್ವರಿತ ಸ್ಪಂದನ! ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದು ಎರಡು ವರ್ಷಗಳಾಗಿವೆ. ಅಧ್ಯಕ್ಷ, ಉಪಾಧ್ಯಕ್ಷ ಮೀಸಲಾತಿ ಈಗ ನಿಗದಿಯಾಗಿದೆ. ಅದರಲ್ಲೂ ಪಕ್ಷ ರಾಜಕಾರಣದ ಮೇಲಾಟ! ತಮಿಳುನಾಡಿನಲ್ಲಿ ಆಡಳಿತಾರೂಢ ಪಕ್ಷಕ್ಕೆ ಮುಂಬರುವ ಚುನಾವಣೆಯ ಚಿಂತೆ. ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಯಾರನ್ನು ಬಿಂಬಿಸಬೇಕು ಎಂಬುದರ ಬಗ್ಗೆ ಹಗ್ಗಜಗ್ಗಾಟ. ಆಂಧ್ರಪ್ರದೇಶದಲ್ಲಿ ಒಂದೆಡೆ ಹಗೆಸಾಧನೆಯ ರಾಜಕಾರಣ. ಮತ್ತೊಂದೆಡೆ, 'ರಾಜಧಾನಿ ರಾಜಕೀಯ'. ಇತ್ತ ಮಹಾರಾಷ್ಟ್ರದಲ್ಲಿ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಕಾಲೆಳೆಯುವ ಆಟ. ಕೆಲವು ರಾಜ್ಯಗಳು ಮತ್ತು ಕೇಂದ್ರದ ನಡುವೆ ತಿಕ್ಕಾಟ... ಈ ಸಂದರ್ಭವು ರಾಜಕೀಯ ಸಂಯಮ, ಪ್ರಬುದ್ಧತೆ, ರಾಷ್ಟ್ರೀಯ ಸಹಮತವನ್ನು ಬಯಸುತ್ತದೆ. ದುರದೃಷ್ಟದ ಸಂಗತಿ ಎಂದರೆ ಅಂತಹ ಯಾವುದೂ ಪ್ರಸ್ತುತ ಸಾಧ್ಯವಿಲ್ಲ ಎಂಬುದಕ್ಕೆ ಕ್ಷಣಕ್ಷಣಕ್ಕೂ ನಿದರ್ಶನ ಸಿಗುತ್ತದೆ.

'ಬಲಿಷ್ಠ'ರಾಗಬೇಕು ಎಂಬುದು ಈ ಹೊತ್ತಿನ ಪ್ರಬಲವಾದ ಹಂಬಲ. ಅದಕ್ಕೆ ಕಷ್ಟಕಾಲ–ಸಮೃದ್ಧಿಯ ಕಾಲ ಎಂಬ ವ್ಯತ್ಯಾಸ ಇರಲಾರದು. ಈ ಹಂಬಲವನ್ನು ವ್ಯಕ್ತಿ ನೆಲೆಯಲ್ಲೂ ಕಾಣಬಹುದು. ಸಮಷ್ಟಿ ನೆಲೆಯಲ್ಲೂ ಕಾಣಬಹುದು. ರಾಜಕೀಯ ಪಕ್ಷಗಳಿಗೂ ಈ ಮಾತು ಅನ್ವಯವಾಗುತ್ತದೆ. ಅದಕ್ಕೆ ಪೂರಕವೆನಿಸುವ ಕ್ರಮಗಳು ನಮಗೆ ಆಪ್ಯಾಯಮಾನ ಅನಿಸತೊಡಗಿರುವುದು ಕಾಲದ ವ್ಯಂಗ್ಯ. ಸರಿ–ತಪ್ಪು, ನೈತಿಕ– ಅನೈತಿಕ ಎಂಬ ಪ್ರಶ್ನೆಗಳಿಗೆ ಇಲ್ಲಿ ತಾವಿಲ್ಲ. ಹಾಗಾಗಿ ನಾಯಕರು ಹೇಳಿದ್ದೇ ಸರಿ ಎಂಬಂತಾಗಿದೆ. ಆದ್ಯತೆಯಾಗಬೇಕಿದ್ದ ವಿಷಯಗಳು ಮರೆಗೆ ಸರಿಯತೊಡಗಿವೆ.

**■ ಎನ್. ಉದಯಕುಮಾರ್**

